ಕರ್ನಾಟಕ ಸರ್ಕಾರ

***ಸಂಖ್ಯೆ:-*** ಪಪೂಶಿಇ/ಆಡಳತ-ಎ/ಉ.ವರ್ಗ-01/2017-18.

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ,
ಮಲ್ಲೇಶ್ವರ, ಬೆಂಗಳೂರು – 560 012
**ದಿನಾಂಕ:**24/01/2018.

## ಸುತ್ತೋಲೆ

**ವಿಷಯ:-** 2017-18ನೇ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಲಿಂಗ್ ಮೂಲಕ ನಿರ್ವಹಿಸುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಅಧಿಸೂಚನೆ: ಸಂವ್ಯಶಾಇ 1 ಶಾಸನ 2007 ದಿನಾಂಕ: 01/09/2007.
2. ಸರ್ಕಾರದ ಅಧಿಸೂಚನೆ: ಇಡಿ 173 ಇಟಿಆರ್ 2007 ದಿನಾಂಕ: 15/10/2007.
3. ಸರ್ಕಾರದ ಅಧಿಸೂಚನೆ: ಇಡಿ ಇಡಿ 173 ಇಟಿಆರ್ 2007 ದಿನಾಂಕ: 14/11/2007.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 37 ಇಟಿಆರ್ 2007 ದಿನಾಂಕ: 23/04/2011.
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 12 ಇಟಿಆರ್ 2017 ದಿನಾಂಕ: 29/11/2017.

*****

"ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮಗಳು-2007" ಮತ್ತು ಉಲ್ಲೇಖ-5ರ ನಿಯಮಗಳನ್ವಯ ಉಪನ್ಯಾಸಕರ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ, 2017-18 ನೇ ಸಾಲಿಗೆ ಉಪನ್ಯಾಸಕರ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸಲಾಗುವುದು. ಈ ವರ್ಗಾವಣೆಗೆ ಅರ್ಜಿಗಳನ್ನು ಆನ್‌ಲೈನ್ (ON LINE) ಮೂಲಕ ಮಾತ್ರ ಸಲ್ಲಿಸತಕ್ಕದ್ದು. **ಖುದ್ದಾಗಿ ಅಥವಾ ಟಪಾಲು ಮೂಲಕ ಲಿಖಿತವಾಗಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ.**

1} - <u>ಸಾಮಾನ್ಯ ಸೂಚನೆಗಳು</u>:-

1. ಅಧಿನಿಯಮ ಮತ್ತು ನಿಯಮಗಳಲ್ಲಿ ನಿಗಧಿಪಡಿಸಿರುವ ವಿಧಿ ವಿಧಾನಗಳನ್ವಯ ಉಪನ್ಯಾಸಕರ ವರ್ಗಾವಣೆಯನ್ನು ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸಲಾಗುವುದು.

2. ಉಪನ್ಯಾಸಕರ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ವರ್ಗಾವಣೆ ವಿಧಗಳಿವೆ.

i. ವರ್ಗಾವಣಾ ನಿಯಮ 4ರನ್ವಯ ಹೆಚ್ಚುವರಿ ಉಪನ್ಯಾಸಕರ ವರ್ಗಾವಣೆ.

ii. ಕಡ್ಡಾಯ ವರ್ಗಾವಣೆಗಳು.

iii. ಕೋರಿಕೆ ವರ್ಗಾವಣೆಗಳು.

iv. ಪರಸ್ಪರ ವರ್ಗಾವಣೆಗಳು.

v. ದೂರಿನ ಪ್ರಕರಣಗಳ ವರ್ಗಾವಣೆ.

3. ವರ್ಗಾವಣೆಗಳಿಗೆ ನಿಗದಿಪಡಿಸಿರುವ ಮಿತಿಗಳು:.

| ಕ್ರಮ ಸಂಖ್ಯೆ | ವರ್ಗಾವಣೆ ವಿಧ | ವರ್ಗಾವಣೆಗೆ ಮಿತಿಗಳು |
|---|---|---|
| 1. | ನಿಯಮ 4ರಂತೆ ಹೆಚ್ಚುವರಿ ಉಪನ್ಯಾಸಕರ ವರ್ಗಾವಣೆ | ಶೇಕಡ 5 |
| 2. | ಕೋರಿಕೆ ವರ್ಗಾವಣೆಗಳು | ಶೇಕಡ 5 |
| 3. | ಕಡ್ಡಾಯ ವರ್ಗಾವಣೆಗಳು | ಶೇಕಡ 5 |
| 4. | ದೂರು ಪ್ರಕರಣಗಳ ವರ್ಗಾವಣೆ | ಮಿತಿ ಇಲ್ಲ |

ಹೆಚ್ಚುವರಿ ವರ್ಗಾವಣೆಗಳನ್ನು 2 ವರ್ಷಗಳಿಗೆ ಒಮ್ಮೆ ಮಾತ್ರ ಕೈಗೊಳ್ಳಬೇಕಾಗಿದ್ದು, ಯಾವುದೇ ಸಾಲಿನಲ್ಲಿ ಹೆಚ್ಚುವರಿ ವರ್ಗಾವಣೆಗಳಿರುವಾಗ ಮೇಲಿನ ಶೇಕಡವಾರು ಮಿತಿ ಕ್ರಮವಾಗಿ 2 ಮತ್ತು 3 ರ ವರ್ಗಾವಣೆಗಳು ಶೇಕಡ 4 ಮತ್ತು ಶೇಕಡ 4 ಎಂಬುದಾಗಿ ನಿಗದಿ ಇರುತ್ತದೆ.

4. **ವರ್ಗಾವಣಾ ಅಧಿನಿಯಮದಂತೆ ಪರಿಭಾಷೆಗಳು:**

I. **"ಗರಿಷ್ಠ ಅವಧಿ"** ಎಂದರೆ, ಒಂದು ವಲಯದಲ್ಲಿ ಬೇರೆ ಬೇರೆ ವೃಂದಗಳಲ್ಲಿ ಒಟ್ಟಾರೆ ಸಲ್ಲಿಸಿರುವ **ಹತ್ತು ವರ್ಷಗಳ** ನಿರಂತರ ಸೇವೆ ("maximum period" means a continuous service of ten years in a zone in a different cadres put together) ಎಂಬುದಾಗಿ ವ್ಯಾಖ್ಯಾನಿಸತಕ್ಕದ್ದು.

II. **"ಕನಿಷ್ಠ ಅವಧಿ"** ಎಂದರೆ, ಒಂದು ವಲಯದಲ್ಲಿ ಬೇರೆ ಬೇರೆ ವೃಂದಗಳಲ್ಲಿ ಒಟ್ಟಾರೆ ಸಲ್ಲಿಸಿರುವ **ಐದು ವರ್ಷಗಳ** ನಿರಂತರ ಸೇವೆ ("minimum period" means a continuous service of five years in a zone in a different cadres put together) ಎಂಬುದಾಗಿ ವ್ಯಾಖ್ಯಾನಿಸತಕ್ಕದ್ದು.

5. 2017-18 ನೇ ಸಾಲಿಗೆ ವರ್ಗಾವಣೆ ಬಯಸುವ ಉಪನ್ಯಾಸಕರು ಅಂತರ್‌ಜಾಲದ (ON LINE) (www.pue.kar.nic.in) ಮೂಲಕ ಮಾತ್ರವೇ ಅರ್ಜಿ ಸಲ್ಲಿಸಬಹುದು. **ಈ ವರ್ಗಾವಣೆಗೆ ಪರೀಕ್ಷಾರ್ಥ ಅವಧಿ ತೃಪ್ತಿಕರವಾಗಿ ಪೂರೈಸಿ ಘೋಷಿಸಲ್ಪಟ್ಟ** ಉಪನ್ಯಾಸಕರು ಮಾತ್ರ ಅರ್ಹರಿರುತ್ತಾರೆ.

6. ***ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02/02/2018***

7. ***ಅಮಾನತ್ತುಗೊಂಡು ನಂತರದಲ್ಲಿ ಶಿಸ್ತುಕ್ರಮ ಬಾಕಿ ಇರಿಸಿ ಅಮಾನತ್ತು ತೆರವುಗೊಳಿಸಿ ಸ್ಥಳ ನಿಯುಕ್ತಿಗೊಂಡ ಉಪನ್ಯಾಸಕರು ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.***

8. **ಕೋರಿಕೆ ಮೇರೆಗೆ ಅಥವಾ ಆದ್ಯತೆ ಅಡಿಯಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸುವಂತಿಲ್ಲ ಅಥವಾ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಕೋರಿಕೆ ಅಥವಾ ಆದ್ಯತೆ ಅಡಿಯಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸುವಂತಿಲ್ಲ. ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸುವಂತಿಲ್ಲ**

9. ಯಾವುದೇ ಆದ್ಯತೆ ಅಡಿಯಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಅದೇ ಆದ್ಯತೆ ಅಡಿಯಲ್ಲಿ ವರ್ಗಾವಣೆಗೆ ಮಾತ್ರ ಅವಕಾಶವಿರುತ್ತದೆ. ಕೌನ್ಸೆಲಿಂಗ್ ಸಮಯದಲ್ಲಿ ಆದ್ಯತೆ ಬದಲಾಯಿಸಲು ಅಥವಾ ಸಾಮಾನ್ಯ ವರ್ಗದಡಿಯಲ್ಲಿ ವರ್ಗಾವಣೆಗೆ ಅವಕಾಶವಿರುವುದಿಲ್ಲ.

10. ವರ್ಗಾವಣೆಯನ್ನು ನಿಗಧಿಪಡಿಸಿರುವ ತಾತ್ಕಾಲಿಕ ವೇಳಾಪಟ್ಟಿಯಂತೆ ನಡೆಸಲಾಗುವುದು.

11. ***ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 12 ಇಟಿಆರ್ 2017, ದಿನಾಂಕ: 29/11/2017 ಕನಿಷ್ಠ ಸೇವಾವಧಿಯನ್ನು ಪೂರ್ಣಗೊಳಿಸದೇ ಇರುವ ಉಪನ್ಯಾಸಕರು ವರ್ಗಾವಣೆಗೆ ಅರ್ಹರಾಗಿರುವುದಿಲ್ಲ.***

12. ***2016ನೇ ಸಾಲಿನಲ್ಲಿ ಹೆಚ್ಚುವರಿ ಉಪನ್ಯಾಸಕರ ಸಮರ್ಪಕ ಮರು ಬಳಕೆಯ/ ಸ್ಥಳ ನಿಯುಕ್ತಿ ಕ್ರಮಗಳು ಜರುಗಿರುವುದರಿಂದ, ಪ್ರಸ್ತುತ ಸಾಲಿನಲ್ಲಿ ಹೆಚ್ಚುವರಿ ಸ್ಥಳನಿಯುಕ್ತಿ ಕ್ರಮಗಳನ್ನು ಹಮ್ಮಿಕೊಳ್ಳಲಾಗಿರುವುದಿಲ್ಲ.***

13. ನಿಯಮ 14 ಮತ್ತು 16 ರಂತೆ ಆಧ್ಯತಾ ಪಟ್ಟಿಯನ್ನು ಪ್ರಕಟಿಸಲಾಗುವುದು.

14. **ಕಡ್ಡಾಯ ವರ್ಗಾವಣೆಗೆ ಮಾರ್ಗಸೂಚಿಗಳು:**

   I. "ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮಗಳು-2017", ಕುರಿತಾದ ವರ್ಗಾವಣಾ ನಿಯಮ-6, 7 ಮತ್ತು 8 ರಲ್ಲಿನಂತೆ ಇರುತ್ತವೆ. ನಿಯಮ-5 ರಲ್ಲಿನ ಅವಕಾಶಗಳಂತೆ ಒಟ್ಟು ಕಡ್ಡಾಯ ವರ್ಗಾವಣೆಗಳ ಪ್ರಮಾಣ ಶೇಕಡ 5 ರಷ್ಟು ಇರುತ್ತದೆ.

   II. ನಿಯಮ-21(4) ರಂತೆ ನಿರ್ದಿಷ್ಟ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂತಹ ಉಪನ್ಯಾಸಕರು ಈಗಾಗಲೇ 'ಎ' ವಲಯದಲ್ಲಿ ಸತತ ಹತ್ತು ವರ್ಷಗಳ ಗರಿಷ್ಠ ಸೇವಾವಧಿಯನ್ನು ಪೂರೈಸಿದ್ದಲ್ಲಿ ಕೋರಿಕೆ ವರ್ಗಾವಣೆಗಳ ನಂತರ ಅಂತಹ ಉಪನ್ಯಾಸಕರಿಗೆ ಕಡ್ಡಾಯ ವರ್ಗಾವಣೆಯನ್ನು ಹಮ್ಮಿಕೊಂಡು 'ಸಿ' ವಲಯದ ಹುದ್ದೆಗೆ ಕಡ್ಡಾಯವಾಗಿ ವರ್ಗಾವಣೆಗೊಳಿಸಲಾಗುವುದು.

   III. ಕಡ್ಡಾಯ ವರ್ಗಾವಣೆಗಳನ್ನು ಹಮ್ಮಿಕೊಳ್ಳಬೇಕಾದ ವೇಳಾಪಟ್ಟಿಯನ್ನು ನಿಯಮ-6 ರಲ್ಲಿ ನಿರ್ದಿಷ್ಟಪಡಿಸಲಾಗಿದೆ. ಅದರಂತೆ, ಮೊದಲನೇ ಹಂತದ ಕೋರಿಗೆ ವರ್ಗಾವಣೆಗಳನ್ನು ಹಮ್ಮಿಕೊಂಡ ನಂತರ ನಿಯಮ-21(4)ರಂತೆ ಕಡ್ಡಾಯ ವರ್ಗಾವಣೆಗಳನ್ನು ಹಮ್ಮಿಕೊಳಬೇಕಾಗಿದೆ. ಅದರಂತೆ, ಈ ಹಂತದಲ್ಲಿ ತಿದ್ದುಪಡಿ ಕಾಯ್ದೆ ಸೆಕ್ಷನ್ 3(ಎ)(1.2) ರಂತೆ, 1ನೇ ಹಂತದಲ್ಲಿ 'ಎ' ವಲಯದಿಂದ 'ಬಿ' ವಲಯದಲ್ಲಿ ಲಭ್ಯವಿರುವ ಖಾಲಿ ಹುದ್ದೆಗೆ ಹಾಗು ಮುಂದಿನ ಹಂತದಲ್ಲಿ 'ಎ' ವಲಯದಿಂದ 'ಸಿ' ವಲಯಕ್ಕೆ ಕಡ್ಡಾಯ ವರ್ಗಾವಣೆಯನ್ನು ಹಮ್ಮಿಕೊಳ್ಳಲಾಗುವುದು.

   IV. ಕಡ್ಡಾಯ ವರ್ಗಾವಣೆಗೆ ಗುರುತಿಸಲಾಗುವ ಉಪನ್ಯಾಸಕರು ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸುವುದನ್ನು ನಿರ್ಬಂಧಿಸಿದೆ.

V. ಕಡ್ಡಾಯ ವರ್ಗಾವಣೆಗೆ ಕಾಯ್ದೆ ಸೆಕ್ಷನ್ 3(ಎ) ರಂತೆ ಖಾಲಿ ಹುದ್ದೆಗಳನ್ನು ಅಧಿಸೂಚಿಸುವ ಕ್ರಮಗಳು ಹಾಗು 10 ವರ್ಷ ಗರಿಷ್ಠ ಸೇವಾವಧಿಯನ್ನು 'ಎ' ವಲಯದಲ್ಲಿ ಪೂರೈಸಿರುವ ಉಪನ್ಯಾಸಕರನ್ನು ಗುರುತಿಸುವ ಕ್ರಮಗಳು: 'ಎ' ವಲಯದಲ್ಲಿ ಹತ್ತು ವರ್ಷಗಳ ಸತತ ಸೇವೆಯ ಗರಿಷ್ಠ ಅವಧಿಯ ಯಾವುದೇ ವೃಂದದಲ್ಲಿ ಸಲ್ಲಿಸಿರಬಹುದಾದ ಒಗ್ಗೂಡಿಸಿದ ನಿರಂತರ ಸೇವೆ ("maximum period" means a continuous service of ten years in a zone in a different cadres put together) ಎಂಬುದಾಗಿ ವ್ಯಾಖ್ಯಾನಿಸತಕ್ಕದ್ದು. ಪರಂತು, ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ಕರ್ನಾಟಕ ರಾಜ್ಯ ಸರ್ಕಾರಿ ಉಪನ್ಯಾಸಕರ ಸಂಘ ಅಥವಾ ಕರ್ನಾಟಕ ಸರ್ಕಾರಿ ನೌಕರರ ಸಂಘದ ಚುನಾಯಿತ ಪದಾಧಿಕಾರಿಯಾಗಿರುವ ಉಪನ್ಯಾಸಕರಿಗೆ ಅಥವಾ ಅವಿವಾಹಿತ ಮಹಿಳಾ ಉಪನ್ಯಾಸಕಿ ಅಥವಾ ವಿಧವೆಯಾಗಿರುವ ಮಹಿಳಾ ಉಪನ್ಯಾಸಕಿ ಅಥವಾ ಶೇಕಡ ನಲವತ್ತಕ್ಕಿಂತ ಹೆಚ್ಚಿನ ಅಂಗವೈಕಲ್ಯವನ್ನು ಹೊಂದಿರುವ ಉಪನ್ಯಾಸಕರಿಗೆ ಈ ಉಪ ಪ್ರಕರಣದ ಉಪಬಂಧದಿಂದ ವಿನಾಯಿತಿಯನ್ನು ನೀಡಲಾಗಿದೆ.

15. **ಅಧ್ಯತೆ ಬಯಸಿ ಅರ್ಜಿ ಸಲ್ಲಿಸುವವರು:** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ . ನಿಯಂತ್ರಣ) ಅಧಿನಿಯಮ-2017ರನ್ವಯ ಹಾಗು ಅದರಡಿಯಲ್ಲಿ ರೂಪಿಸಲಾಗಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2017 ರಲ್ಲಿನ ನಿಯಮ 12 ರಲ್ಲಿ ನಿರ್ಧಿಷ್ಟಪಡಿಸಿರುವಂತೆ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದು ನಿಯಮ 14ರಲ್ಲಿನ ಅವಕಾಶಗಳಂತೆ ಅದ್ಯತೆಯನ್ನು ಕೋರಿ ಅರ್ಜಿ ಸಲ್ಲಿಸತಕ್ಕದ್ದು. ವರ್ಗಾವಣೆಗಳಗೆ ಸಂಬಂಧಪಟ್ಟಂತೆ ಅದ್ಯತಾ ಪ್ರಕರಣಗಳ ವಿವರ ಕೆಳಗಿನಂತಿದೆ.

I. **ಗಂಭೀರ ಸ್ವರೂಪದ ಕಾಯಿಲೆ ಪ್ರಕರಣಗಳು:-** ಅತ್ಯಂತ , ತೀವ್ರತರವಾದ ಕಾಯಿಲೆಯ ಪ್ರಕರಣಗಳಲ್ಲಿ ಅಧಿನಿಯಮದ 6 (2) (4) ರಲ್ಲಿ ಸೂಚಿಸಿರುವಂತೆ ಅವರ ಪತಿ/ ಪತ್ನಿ ಅಥವಾ ಮಕ್ಕಳು ಗಂಭೀರ ಖಾಯಿಲೆಯಿಂದ ಬಳಲುತ್ತಿದ್ದಲ್ಲಿ ಮತ್ತು ಅದಕ್ಕೆ ವೈದ್ಯಕೀಯ ಚಿಕಿತ್ಸೆಯು ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ದೊರೆಯದಿದ್ದಲ್ಲಿ ಮತ್ತು ಅವನಿಗೆ/ಅವಳಿಗೆ ವೈದ್ಯಕೀಯ ಚಿಕಿತ್ಸೆ ದೊರೆಯುವಂಥ ಸ್ಥಳಕ್ಕೆ ವರ್ಗಾವಣೆ ಪಡೆಯುವುದು ಅವಶ್ಯಕವಾಗಿದ್ದಲ್ಲಿ, ಚಿಕಿತ್ಸೆಯ ಸ್ವರೂಪ, ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಸಂಬಂಧಪಟ್ಟ ಖಾಯಿಲೆಗೆ ವೈದ್ಯಕೀಯ ಚಿಕಿತ್ಸೆ ದೊರೆಯದೇ ಇರುವ ಬಗ್ಗೆ, ಹಾಗೂ ಅಂತಹ ವೈದ್ಯಕೀಯ ಚಿಕಿತ್ಸೆ ದೊರೆಯುವ ಸ್ಥಳದ ಬಗ್ಗೆ ಮತ್ತು ಉಪನ್ಯಾಸಕರು ಅಗತ್ಯ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವರನ್ನು ಅಂತಹ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಿದೆ ಎಂಬುದರ ಬಗ್ಗೆ ನಿರ್ಧಿಷ್ಟವಾಗಿ ಜಿಲ್ಲಾ ವೈದ್ಯಕೀಯ ಮಂಡಳಿಯು ಪ್ರಮಾಣಿಸಲ್ಪಟ್ಟ ಪ್ರಸಕ್ತ ಸಾಲಿಗೆ ಚಾಲ್ತಿಯಲ್ಲಿರುವ ಪ್ರಮಾಣ ಪತ್ರವನ್ನು ಹಾಜರುಪಡಿಸಿದಲ್ಲಿ ಮಾತ್ರ ವೈದ್ಯಕೀಯ ಪ್ರಕರಣದಲ್ಲಿ ಪರಿಗಣಿಸಲಾಗುವುದು (ನಮೂನೆ-1) ಉದಾ: **ಹೃದಯ ಸಂಬಂಧಿ, ಕಿಡ್ನಿ, ಕ್ಯಾನ್ಸರ್ ಮತ್ತು ಹೆಚ್ ಐ ವಿ ಕಾಯಿಲೆಗಳಿಂದ ನರಳುತ್ತಿರುವವರಿಗೆ ಮಾತ್ರ ಈ ಪ್ರಕರಣದಡಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ ಯಾವುದೇ ಸೂಚನೆ ನೀಡದೇ ಇಂತಹರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು. ಪತಿ-ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ಯಾರಾದರೂ ಒಬ್ಬರು ಮಾತ್ರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ.**

II. **ತೆರೆದ ಹೃದಯ ಶಸ್ತ್ರ ಚಿಕಿತ್ಸೆ ಅಂಗಾಂಗ ಕಸಿ/ ಮರು ಜೋಡಣಾ ಶಸ್ತ್ರ ಚಿಕಿತ್ಸೆಗೆ ಒಳಪಟ್ಟಿರುವ ಪ್ರಕರಣಗಳು:** ಸೂಕ್ತ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದಲ್ಲಿ ಮಾತ್ರ ಪರಿಗಣಿಸಲಾಗುವುದು.

III. **ದೈಹಿಕ ಅಂಗವಿಕಲ ಪ್ರಕರಣಗಳು:-** ಅಂಗವಿಕಲತಾ ಮೀಸಲಾತಿಯಲ್ಲಿ ನೇಮಕಾತಿ ಹೊಂದಿರಬೇಕು ಹಾಗು ದೈಹಿಕ ಅಂಗವಿಕಲ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಶಸ್ತ್ರ ವೈದ್ಯರಿಂದ ಪ್ರಮಾಣೀಕರಿಸಲಾದಂತೆ **ಶೇಕಡ 40 ಕ್ಕಿಂತ ಹೆಚ್ಚಿನ ದೈಹಿಕ ಅಶಕ್ತತೆ ಇರುವ ಬಗ್ಗೆ ಜಿಲ್ಲಾ ಶಸ್ತ್ರವೈದ್ಯರು ಪ್ರಮಾಣೀಕರಿಸಿದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ ಯಾವುದೇ ಸೂಚನೆ ನೀಡದೇ ಇಂತಹರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು.**

IV. **ವಿಧವಾ ಉಪನ್ಯಾಸಕರ ಪ್ರಕರಣಗಳು:** ಪತಿಯ ಮರಣ ಸಮರ್ಥನಾ ಪ್ರಮಾಣ ಪತ್ರ ಅಥವಾ ವಿಧವಾ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದಾದರೂ ಒಂದು ಕಾನೂನಾತ್ಮಕ ದಾಖಲೆಯನ್ನು ಹಾಜರುಪಡಿಸುವುದು. ಜೊತೆಗೆ ಪತಿ-ಪತ್ನಿ ಕುರಿತಾಗಿ ಸೇವಾ ಪುಸ್ತಕದ ಉದೃತ, ಚುನಾವಣಾ ಗುರುತಿನ ಚೀಟಿ, ಇತರೆ ಯಾವುದಾದರೂ ಕಾನೂನಾತ್ಮಕ ಗುರುತಿನ ಪತ್ರ.

V. **ಅವಲಂಭಿತ ಮಕ್ಕಳಿರುವ ವಿಚ್ಛೇದಿತ ಮಹಿಳಾ ಉಪನ್ಯಾಸಕರ ಪ್ರಕರಣ:** ವಿಚ್ಛೇದನೆಯಾಗಿರುವ ಬಗ್ಗೆ ನ್ಯಾಯಾಲಯ ನೀಡಿರುವ ಡಿಕ್ರಿ ಪ್ರತಿ ಮತ್ತು ಮರು ಮದುವೆಯಾಗಿಲ್ಲದಿರುವ ಬಗ್ಗೆ ಹಾಗು ಅವಲಂಬಿತ ಮಕ್ಕಳಿರುವ ಬಗ್ಗೆ ಇತ್ತೀಚಿನ ದಿನಾಂಕದಂದು ಮ್ಯಾಜಿಸ್ಟ್ರೇಟ್ ನ್ಯಾಯಾಲಯದಿಂದ ಪಡೆದ ಘೋಷಣಾ ಪತ್ರವನ್ನು ಸಲ್ಲಿಸತಕ್ಕದ್ದು.

VI. **ನಿವೃತ್ತ/ಮೃತ/ಅಂಗವಿಕಲ ಸೈನಿಕ ಪ್ರಕರಣಗಳು:** ಭಾರತೀಯ ರಕ್ಷಣಾ ಪಡೆ/ಅರೆ ಮಿಲಿಟರಿ ಪಡೆಗಳಲ್ಲಿ (ಕೇಂದ್ರ ಗೃಹ ಮಂತ್ರಾಲಯವು ಕರೆಯುವ ಯಾವುದೇ ಹೆಸರಿನ ಸೈನಿಕರು) ಮೃತರಾಗಿರುವ ಅವಲಂಬಿತರಿಗೆ (ಒಂದು ಸಲದ ಕ್ರಮವಾಗಿ) / ನಿವೃತ್ತರಾಗಿರುವ ಅವಲಂಬಿತರಿಗೆ (ಒಂದು ಸಲದ ಕ್ರಮವಾಗಿ) / ಶಾಶ್ವತ ಅಂಗವಿಕಲ ಸೈನಿಕರ ಪತಿ ಅಥವಾ ಪತ್ನಿರವರು ಸಕ್ಷಮ ಪ್ರಾಧಕಾರದಿಂದ ಪಡೆದ ಪ್ರಮ್ಮಾಣಪತ್ರವನ್ನು ಹಾಜರುಪಡಿಸುವುದು.

VII. **ಸೈನಿಕ ಪ್ರಕರಣಗಳು:** ಭಾರತೀಯ ರಕ್ಷಣಾ ಪಡೆ/ಅರೆ ಮಿಲಿಟರಿ ಪಡೆಗಳಲ್ಲಿ (ಕೇಂದ್ರ ಗೃಹ ಮಂತ್ರಾಲಯವು ಕರೆಯುವ ಯಾವುದೇ ಹೆಸರಿನ ಸೈನಿಕರು) ಪತಿ/ಪತ್ನಿ ಸೈನಿಕ ಪ್ರಕರಣಗಳಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.

VIII. **ವಿವಾಹಿತ ಉಪನ್ಯಾಸಕರ ಪ್ರಕರಣಗಳು:**

i. ಪತಿ ಮತ್ತು ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿರುವ ಪ್ರಕರಣಗಳು: ಪತಿ ಮತ್ತು ಪತ್ನಿ ಇಬ್ಬರೂ ರಾಜ್ಯ ಸರ್ಕಾರಿ ನೌಕರರಾಗಿರುವ ಪ್ರಕರಣಗಳು. ರಾಜ್ಯ ಸರ್ಕಾರ ಅಥವಾ ಕೇಂದ್ರ/ರಾಜ್ಯ ಸರ್ಕಾರಿ ನೌಕರರಾಗಿದ್ದರೆ ಅಥವಾ ಸಾರ್ವಜನಿಕ ವಲಯದ ಉದ್ದಿಮೆಯ ಖಾಯಂ ನೌಕರರಾಗಿದ್ದರೆ ಅಥವಾ ಪ್ರಾಯೋಜಕತ್ವದ ಸೊಸೈಟಿಯಲ್ಲಿನ ಖಾಯಂ ನೌಕರರಾಗಿದ್ದಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕಿನ ಖಾಯಂ ಉದ್ಯೋಗಿಯಾಗಿದ್ದರೆ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರನ್ನು ಸಹ ಸರ್ಕಾರಿ ನೌಕರರೆಂದು ಪರಿಗಣಿಸಲಾಗವುದು ನೇಮಕಾತಿ ಪ್ರಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರವನ್ನು ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಪತಿ - ಪತ್ನಿ ಪ್ರಕರಣದಡಿ ಅರ್ಜಿ ಸಲ್ಲಿಸಿದ್ದಲ್ಲಿ ಪತಿ ಅಥವಾ ಪತ್ನಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಹುದ್ದೆ ಖಾಲಿ ಇದ್ದಲ್ಲಿ ಅಂತಹ ಸ್ಥಳವನ್ನೇ

ಆಯ್ಕೆ ಮಾಡಿಕೊಳ್ಳತಕ್ಕದ್ದು. ಬೇರೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಒಂದು ವೇಳೆ ಪತಿ ಅಥವಾ ಪತ್ನಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಹುದ್ದೆ ಖಾಲಿ ಇಲ್ಲದಿದ್ದಲ್ಲಿ **ಅತಿ ಸಮೀಪದ ಖಾಲಿ** ಇರುವ ಹುದ್ದೆಯನ್ನು ಆಯ್ಕೆ ಮಾಡಿಕೊಳ್ಳಬಹುದು.

- ಸರ್ಕಾರಿ ನೌಕರರು ಎಂಬುದಕ್ಕೆ ಕೆ ಜಿ ಐ ಡಿ ಸಂಖ್ಯೆ ಮತ್ತು ಹೆಚ್ ಆರ್ ಎಂ ಎಸ್ ಹಾಗು ಸೇವಾ ದೃಢೀಕರಣ ಪ್ರತಿಯನ್ನು ಸಲ್ಲಿಸತಕ್ಕದ್ದು.
- ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಕೆ ಪಿ ಟಿ ಸಿ ಎಲ್, ಜಲಮಂಡಳಿ, ಮಹಾನಗರ ಪಾಲಿಕೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನೂ ಸಹ ಸರ್ಕಾರಿ ನೌಕರರೆಂದು ಪರಿಗಣಿಸಲಾಗುವುದು. ಈ ಕುರಿತಂತೆ ಅಗತ್ಯ ದೃಢೀಕರಣ ಮತ್ತು ದಾಖಲೆಗಳನ್ನು ಸಲ್ಲಿಸತಕ್ಕದ್ದು ಮತ್ತು ಖಾಯಂ ನೌಕರರು ಎಂಬ ಬಗ್ಗೆ ಸ್ಪಷ್ಟ ದಾಖಲೆ ಮತ್ತು ದೃಢೀಕರಣ ಸಲ್ಲಿಸತಕ್ಕದ್ದು.
- ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿರುವ ರೈಲ್ವೇ ಇಲಾಖೆ, ದೂರದರ್ಶನ, ಆಕಾಶವಾಣಿ, ಅಂಚೆ ಇಲಾಖೆ, ರಕ್ಷಣಾ ಸಚಿವಾಲಯದ ವ್ಯಾಪ್ತಿಯಲ್ಲಿ ಬರುವ ಇಸ್ರೋ, ಹೆಚ್ ಎ ಎಲ್, ಎನ್ ಎ ಎಲ್, ಬಿ ಹೆಚ್ ಇ ಎಲ್, ಬಿ ಇ ಎಲ್, ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳು ಎಂಬುದಾಗಿ ಅಧಿಕೃತರಿಂದ ಪಡೆದ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಪ್ರರಣಗಳು.

ii. ಉಪನ್ಯಾಸಕರ ಪತಿ/ಪತ್ನಿ ಅನುದಾನಿತ ಶಿಕ್ಷಣ ಸಂಸ್ಥೆಯ ಖಾಯಂ ನೌಕರರಾಗಿದ್ದಲ್ಲಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

iii. ಗರ್ಭಿಣಿ ಮಹಿಳಾ ಉಪನ್ಯಾಸಕರು ಅಥವಾ ಒಂದು ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳಿರುವ ಮಹಿಳಾ ಉಪನ್ಯಾಸಕರ ಪ್ರಕರಣದಲ್ಲಿ ಇತ್ತೀಚಿನ ದಿನಾಂಕದಿಂದ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ ಮತ್ತು ಮಗುವಿನ ಜನ್ಮ ದೃಢೀಕರಣ ಪತ್ರ ಮತ್ತು ಪ್ರಸೂತಿ ರಜೆಯನ್ನು ಪಡೆದು ಸೇವಾ ವಹಿಯಲ್ಲಿ ದೃಢೀಕರಿಸಿರುವ ಬಗ್ಗೆ ಸೇವಾವಹಿಯ ಉದ್ಧೃತ ಭಾಗದ ಪ್ರತಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸುವ ದಿನಾಂಕಕ್ಕೆ 11 ತಿಂಗಳು ಅಥವಾ ಕಡಿಮೆ ವಯೋಮಾನದ ಜೀವಂತ ಮಕ್ಕಳಿರುವ ಉಪನ್ಯಾಸಕರು ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

IX. ಇತರೆ ಮಹಿಳಾ ಉಪನ್ಯಾಸಕರ ಪ್ರಕರಣಗಳು.

X. **ಮನ್ನಣೆ ಪಡೆದ ರಾಜ್ಯ ಸರ್ಕಾರಿ ನೌಕರರ ಸಂಸ್ಥೆಗಳ ಚುನಾಯಿತ ಪದಾಧಿಕಾರಿಗಳು:** ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ಕರ್ನಾಟಕ ರಾಜ್ಯ ಸರ್ಕಾರಿ ಉಪನ್ಯಾಶಕರ ಸಂಘ ಅಥವಾ ಕರ್ನಾಟಕ ಸರ್ಕಾರಿ ನೌಕರರ ಸಂಘದ ಚುನಾಯಿತ ಪದಾಧಿಕಾರಿಯಾಗಿದ್ದಲ್ಲಿ, ಎಷ್ಟನೇ ಬಾರಿಗೆ ಆಯ್ಕೆಯಾಗಿರುತ್ತಾರೆ, ಆಯ್ಕೆಯಾದ ಅವಧಿ ವಿವರಗಳುಳ್ಳ ಒಂದು ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. **(ಉದಾಹರಣೆಗೆ:-** ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಯಾಗಿ ಆಯ್ಕೆಯಾಗಿದ್ದಲ್ಲಿ ಪದಾಧಿಕಾರಿಯಾಗಿ ಆಯ್ಕೆಯಾಗಿರುವ ಬಗ್ಗೆ ಚುನಾವಣಾಧಿಕಾರಿ/ತಹಶೀಲ್ದಾರ್‌ರು ನೀಡಿರುವ ಮೂಲ ಪ್ರಮಾಣ ಪತ್ರ ಒದಗಿಸತಕ್ಕದ್ದು). ನಾಮ ನಿರ್ದೇಶನ ಮಾಡಿಕೊಂಡ ಪದಾಧಿಕಾರಿಗಳು ಈ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ. **(ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007ರ ನಿಯಮ 8(10) ರಲ್ಲಿನ ಅವಕಾಶದಂತೆ).**

XI. ಇತರೆ ಪುರುಷ ಉಪನ್ಯಾಸಕರು.

16. ಪರಸ್ಪರ ವರ್ಗಾವಣೆ ಪ್ರಕರಣಗಳು:

I. ಎಲ್ಲಾ ಪರಸ್ಪರ ವರ್ಗಾವಣೆಗಳನ್ನು ಇಬ್ಬರೂ ಉಪನ್ಯಾಸಕರ ಒಪ್ಪಿಗೆ ಇದ್ದಲ್ಲಿ ಮಾತ್ರ ಪರಿಗಣಿಸಲಾಗುವುದು ಹಾಗೂ ಪರಸ್ಪರ ವರ್ಗಾವಣೆ ಕೋರುವ ಉಪನ್ಯಾಸಕರಿಬ್ಬರೂ **ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವೆಂದು ಘೋಷಿಸಲ್ಪಟ್ಟಿರಬೇಕು.**

II. **ಪರಸ್ಪರ ವರ್ಗಾವಣೆ ಬಯಸುವ ಉಪನ್ಯಾಸಕರು ವರ್ಗಾವಣೆಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೆ ನಿವೃತ್ತಿ ಹೊಂದಲು ಮೂರು ವರ್ಷಕ್ಕಿಂತ ಹೆಚ್ಚಿನ ಸೇವೆ ಹೊಂದಿರಬೇಕು ಹಾಗೂ ಮೂರು ವರ್ಷಕ್ಕಿಂತ ಕಡಿಮೆ ಅವಧಿ ಇರುವ ಉಪನ್ಯಾಸಕರು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.**

III. ***ಪರಸ್ಪರ ವರ್ಗಾವಣೆ ಬಯಸುವ ಉಪನ್ಯಾಸಕರು ಸಹ ಕೌನ್ಸೆಲಿಂಗ್‌ನಲ್ಲಿ ತಪ್ಪದೇ ಹಾಜರಾಗತಕ್ಕದ್ದು, ಹಾಜರಾಗದೇ ಇದ್ದಲ್ಲಿ ಪರಸ್ಪರ ವರ್ಗಾವಣೆಯನ್ನು ಪಡೆಯಲು ಇಚ್ಛಿಸುವುದಿಲ್ಲವೆಂದು ಭಾವಿಸಿ ಮನವಿಯನ್ನು ತಿರಸ್ಕರಿಸಲಾಗುವುದು.***

IV. **'ಎ' ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು ಪ್ರಸ್ತುತ ಸ್ಥಳದಲ್ಲಿ ಏಳು ವರ್ಷಗಳ ಅಥವ ಹೆಚ್ಚಿನ ಸತತ ಸೇವೆಯನ್ನು ಪೂರೈಸಿರಬಾರದು.**

V. **ಪರಸ್ಪರ ವರ್ಗಾವಣೆ ಬಯಸುವ ಉಪನ್ಯಾಸಕರು ಕೇವಲ ಒಬ್ಬರೊಂದಿಗೆ ಮಾತ್ರ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಬೇಕು. ಒಂದಕ್ಕಿಂತ ಹೆಚ್ಚು ಜನರೊಂದಿಗೆ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

VI. **'ಎ' ವಲಯದಿಂದ 'ಎ' ವಲಯಕ್ಕೆ ಪರಸ್ಪರ ವರ್ಗಾವಣೆಗೆ ಅವಕಾಶವಿರುವುದಿಲ್ಲ.**

VII. **ಹೆಚ್ಚುವರಿಯಾಗಿರುವ ಉಪನ್ಯಾಸಕರು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಪರಿಗಣಿಸಲಾಗುವುದಿಲ್ಲ.**

VIII. **ಈ ಹಿಂದೆ ಒಂದು ಬಾರಿ ಪರಸ್ಪರ ವರ್ಗಾವಣೆಯನ್ನು ಪಡೆದಿದ್ದಲ್ಲಿ ಅಂತಹ ಉಪನ್ಯಾಸಕರು ಪುನಃ ಪರಸ್ಪರ ವರ್ಗಾವಣೆಗೆ ಅರ್ಹರಾಗಿರುವುದಿಲ್ಲ.**

17. ***ಅರ್ಜಿ ನಮೂನೆಯಲ್ಲಿ ಸೇವಾ ವಿವರ ನಮೂದಿಸುವಾಗ ನಿಯಮ 7 (2) ರ ಪ್ರಕಾರ ಆಯಾ ವೃಂದ ಅಂದರೆ ಉಪನ್ಯಾಸಕರ ವೃಂದದಲ್ಲಿ ಸಲ್ಲಿಸಿರುವ ಸೇವಾ ವಿವರವನ್ನು ಮಾತ್ರ ನಮೂದಿಸತಕ್ಕದ್ದು.***

18. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007 ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು, 2007 ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ನಿಯಮಗಳು, 2011 ನ್ನು ಇಲಾಖೆಯ ಅಂತರ್ಜಾಲ (www.pue.kar.nic.in ದಲ್ಲಿ Promotion/Transfer Link and also in bulletin Board) ದಲ್ಲಿ ಅಳವಡಿಸಿದೆ. ಅಧಿನಿಯಮ ಮತ್ತು ನಿಯಮಗಳನ್ನು ಪರಿಶೀಲಿಸಬಹುದು.

***III. ಗಣಕೀಕೃತ ಕೌನ್ಸೆಲಿಂಗ್ ವರ್ಗಾವಣೆಗೆ ಅಂತರ್‌ಜಾಲದ ಮೂಲಕ* (ON LINE) *ಅರ್ಜಿ ಸಲ್ಲಿಸಲು / ಮಾಹಿತಿ ಭರ್ತಿ ಮಾಡುವ ಬಗ್ಗೆ ಸೂಚನೆಗಳು:-***

1. www.pue.kar.nic.in ವಿಳಾಸದಲ್ಲಿ ವರ್ಗಾವಣೆ 2017-18 LINK ಕ್ಲಿಕ್ ಮಾಡುವುದು. ಕ್ಲಿಕ್ ಮಾಡಿದ ನಂತರ ವರ್ಗಾವಣೆಗೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007 ಮತ್ತು ಸರ್ಕಾರದ ವರ್ಗಾವಣಾ

ನಿಯಮ ಅಧಿಸೂಚನೆ ಸಂಖ್ಯೆ: ಇಡಿ 12 ಇಟಿಆರ್ 2017 ದಿನಾಂಕ: 29/11/2017 ನಿಯಮಗಳನ್ನು ಓದಿಕೊಳ್ಳುವುದು ಅಥವಾ ಡೌನ್ ಲೋಡ್ ಮಾಡಿಕೊಳ್ಳಬಹುದು.

2. **ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸೂಚನೆಗಳ ಬಗ್ಗೆ ಈ ಕಚೇರಿ ಸುತ್ತೋಲೆ ಸಂಖ್ಯೆ: ಪಪೂಶಿಇ ಆಡಳಿತ-ಎ ಉ.ವರ್ಗ 01/2017-18 ದಿನಾಂಕ: 24/01/2018 LINK ಕ್ಲಿಕ್ ಮಾಡಿ ಓದಿಕೊಳ್ಳುವುದು ಅಥವಾ ಡೌನ್, ಲೋಡ್ ಮಾಡಿಕೊಂಡು ಓದಿಕೊಳ್ಳಬಹುದು.**

3. ಭರ್ತಿ ಮಾಡಿ ಮುದ್ರಿತ ಅರ್ಜಿ ಪಡೆದ ಮೇಲೆ ಅರ್ಜಿಯ ಪ್ರತಿ ಮತ್ತು ಇತರೆ ಪ್ರತಿಗಳನ್ನು ಕಡ್ಡಾಯವಾಗಿ ಪ್ರಾಚಾರ್ಯರ ಮೂಲಕ ಜಿಲ್ಲಾ ಉಪ ನಿರ್ದೇಶಕರ ಮೂಲಕ ನಿಗಧಿತ ಅವದಿಯೊಳಗೆ ಸಲ್ಲಿಸುವುದು. ಅವಧಿ ಮುಗಿದ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

4. ***ಆಕ್ಷೇಪಣೆಗಳನ್ನು ದಿನಾಂಕ: 28/02/2018 ರ ಒಳಗಾಗಿ ಉಪ ನಿರ್ದೇಶಕರು (ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರ, ಬೆಂಗಳೂರು-560 012 ಹಾಗೂ ಇ-ಮೇಲ್ ಮೂಲಕ pueest2@gmail.com ಈ ವಿಳಾಸಕ್ಕೆ ಸಲ್ಲಿಸಬಹುದು.***

5. ***ಪ್ರಕಟಿಸಲಾಗುವ ನಿಗಧಿತ ಆದ್ಯತಾ ಪಟ್ಟಿಗೆ ಆಕ್ಷೇಪಣಗಳನ್ನು ಪೂರಕ ದಾಖಲೆಗಳೊಂದಿಗೆ ನಿಗಧಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ಸದರಿ ದಿನಾಂಕದ ನಂತರ ಸಲ್ಲಿಸಲ್ಪಡುವ ಯಾವುದೇ ಆಕ್ಷೇಪಣೆಗಳನ್ನು ಪುರಸ್ಕರಿಸಲಾಗುವುದಿಲ್ಲ.***

6. ***ಕೌನ್ಸಿಲಿಂಗ್ ದಿನಾಂಕಗಳು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಯ ಷರತ್ತಿಗೆ ಒಳಪಟ್ಟಿದೆ. ಹೆಚ್ಚಿನ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ನೀಡಲಾಗುವುದು.***

***III} ದಿನಾಂಕ: 06/02/2018 ರೊಳಗಾಗಿ ಜಿಲ್ಲಾ ಉಪ ನಿರ್ದೇಶಕರಿಗೆ ಕಡ್ಡಾಯವಾಗಿ ಕಳುಹಿಸ ಬೇಕಾಗುವ ದಾಖಲೆಗಳು:-***

1. ಮಾಹಿತಿ ಭರ್ತಿ ಮಾಡಿ ಪಡೆದ ಪ್ರಿಂಟ್‌ಔಟ್‌ನ ಸ್ವಯಂ ದೃಢೀಕೃತ ಮೂಲ ಪ್ರತಿ.

2. ಪರೀಕ್ಷಾರ್ಥ ಅವಧಿ ತೃಪ್ತಿಕರವಾಗಿ ಪೂರೈಸಿದ ಬಗ್ಗೆ ಉಪನ್ಯಾಸಕರ ಹುದ್ದೆಯಲ್ಲಿ ಘೋಷಿಸಿದ ಆದೇಶದ ಪ್ರತಿ. ಆದೇಶದ ಪ್ರತಿ ಲಭ್ಯವಿಲ್ಲದಿದ್ದಲ್ಲಿ ಸೇವಾ ಪುಸ್ತಕದಲ್ಲಿ ನಮೂದಿಸಿರುವ ದಾಖಲೆ ಆಧಾರದ ಮೇಲೆ ಪ್ರಾಚಾರ್ಯರಿಂದ ಪರೀಕ್ಷಾರ್ಥ ಅವಧಿ ಪೂರೈಸಿರುವ ಬಗ್ಗೆ ಮೂಲ ಪ್ರಮಾಣ ಪತ್ರ ಸಲ್ಲಿಸಬೇಕು.

3. ಅತ್ಯಂತ ತೀವ್ರತರವಾದ ಕಾಯಿಲೆಯ ಪ್ರಕರಣಗಳಲ್ಲಿ ವೈದ್ಯಕೀಯ ಆದ್ಯತೆ ಕೋರಿದ್ದಲ್ಲಿ ಜಿಲ್ಲಾ ವೈದ್ಯಕೀಯ ಮಂಡಳಿ ನೀಡಿರುವ ಮೂಲ ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸುವುದು (ನಮೂನೆ-1). ಉದಾ: **ಹೃದಯ ಸಂಬಂಧಿ, ಕಿಡ್ನಿ, ಕ್ಯಾನ್ಸರ್ ಮತ್ತು ಹೆಚ್ ಐ ವಿ ಕಾಯಿಲೆಗಳಿಂದ ನರಳುತ್ತಿರುವವರಿಗೆ ಮಾತ್ರ ಈ ಪ್ರಕರಣದಡಿ ಅರ್ಜಿ ಸಲ್ಲಿಸಲು ಅವಕಾಶವಿದೆ**. ಸುಳ್ಳು ಪ್ರಮಾಣ ಪತ್ರಗಳನ್ನು ಸಲಿಸಿದಲ್ಲಿ ಯಾವುದೇ ಸೂಚನೆ ನೀಡದೇ ಶಿಸ್ತಿನ ಕ್ರಮ ಜರುಗಿಸಲಾಗುವುದು.

4. ಅಂಗವಿಕಲ ಆದ್ಯತೆ ಕೋರಿದ್ದಲ್ಲಿ ಶೇಕಡ 40 ಕ್ಕಿಂತ ಹೆಚ್ಚಿನ ಅಶಕ್ತತೆ ಹೊಂದಿರುವ ಜಿಲ್ಲಾ ಶಸ್ತ್ರವೈದ್ಯರು ನೀಡಿರುವ ಮೂಲ ಪ್ರಮಾಣ ಪತ್ರ ಮತ್ತು ಒಂದು ಫೋಟೋ ಪ್ರತಿ. (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ)

5. ವಿಧವೆ ಪ್ರಕರಣದಡಿಯಲ್ಲಿ ಆದ್ಯತೆ ಪಡೆದಿದ್ದಲ್ಲಿ ಪತಿಯ ಮರಣ ಸಮರ್ಥನಾ ಮೂಲ ಪ್ರಮಾಣ ಪತ್ರ ಮತ್ತು ಒಂದು ಫೋಟೋ ಪ್ರತಿ. (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ)

6. ಸೈನಿಕ ಸೇವೆಯ ಆದ್ಯತೆ ಪಡೆದಿದ್ದಲ್ಲಿ ಸೂಕ್ತ ಪ್ರಾಧಿಕಾರ ನೀಡಿರುವ ಮೂಲ ಸಮರ್ಥನಾ ಪ್ರಮಾಣ ಪತ್ರ. (*ಅಂದರೆ ಭಾರತೀಯ ರಕ್ಷಣಾ ಪಡೆ / ಅರೆ ಮಿಲಿಟರಿ ಪಡೆಗಳಲ್ಲಿ (ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ಕರೆಯುವ ಯಾವುದೇ ಹೆಸರಿನ ಸೈನಿಕರು) ಕಾರ್ಯ ನಿರ್ವಹಿಸುತ್ತಿರುವ / ಮೃತರಾಗಿರುವ / ನಿವೃತ್ತರಾಗಿರುವ / ಶಾಶ್ವತ ಅಂಗವಿಕಲ ಸೈನಿಕರ ಪತಿ ಅಥವಾ ಪತ್ನಿ – ಮಿಲಿಟರಿ ಸೇವೆಯಲ್ಲಿರುವ ಬಗ್ಗೆ, ಮೃತರಾಗಿರುವ ಬಗ್ಗೆ, ನಿವೃತ್ತರಾಗಿರುವ ಬಗ್ಗೆ ಶಾಶ್ವತ ಅಂಗವಿಕಲ ಹೊಂದಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರವನ್ನು ತರತಕ್ಕದ್ದು*) (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ)

7. ಪತಿ-ಪತ್ನಿ ಪ್ರಕರಣದಲ್ಲಿ ಆದ್ಯತೆ ಪಡೆದಿದ್ದಲ್ಲಿ ನಿಗಧಿಪಡಿಸಿದ ನಮೂನೆ 2ರಲ್ಲಿ ಪತಿ/ಪತ್ನಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯಿಂದ ಪಡೆದ ಮೂಲ ಪ್ರಮಾಣ ಪತ್ರ. (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ)

8. ಮನ್ನಣೆ ಪಡೆದ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಪ್ರಕರಣದಲ್ಲಿ ಆದ್ಯತೆ ಪಡೆದಿದ್ದಲ್ಲಿ ಸಂಘದ ಪದಾಧಿಕಾರಿಯಾಗಿ ಆಯ್ಕೆಯಾಗಿರುವ ಬಗ್ಗೆ ನೀಡಿರುವ ಆಯ್ಕೆ ಮೂಲ ಪ್ರಮಾಣ ಪತ್ರ. (ಉದಾಹರಣೆಗೆ:- ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಯಾಗಿ ಆಯ್ಕೆಯಾಗಿದ್ದಲ್ಲಿ ಪದಾಧಿಕಾರಿಯಾಗಿ ಆಯ್ಕೆಯಾಗಿರುವ ಬಗ್ಗೆ ಚುನಾವಣಾಧಿಕಾರಿ/ತಹಶೀಲ್ದಾರ್‌ರು ನೀಡಿರುವ ಮೂಲ ಪ್ರಮಾಣ ಪತ್ರ ಒದಗಿಸತಕ್ಕದ್ದು) (ವರ್ಗಾವಣೆಗೆ ಈ ಆದ್ಯತೆ ಕೋರಿದ್ದಲ್ಲಿ)

9. ವಲಯವಾರು ಸಲ್ಲಿಸಿರುವ ಸೇವಾ ಅವಧಿ ಕುರಿತು ಸೇವಾ ಪುಸ್ತಕ ಆಧಾರದ ಮೇಲೆ ಪ್ರಾಚಾರ್ಯರಿಂದ ದೃಢೀಕರಿಸಿ ನೀಡಿರುವ ಮೂಲ ವಿವರಣಾ ಪತ್ರ (ನಮೂನೆ 3)

10. ಪರಸ್ಪರ ವರ್ಗಾವಣೆಗೆ ಮಾಹಿತಿ ಭರ್ತಿ ಮಾಡಿ ಪಡೆದ ಪ್ರಿಂಟ್‌ಔಟ್‌ನ ಪ್ರತಿ.

11. ಪರಸ್ಪರ ವರ್ಗಾವಣೆ ಬಯಸುವ ಇಬ್ಬರೂ ಉಪನ್ಯಾಸಕರೂ ಸಹ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಲೇಬೇಕು ಹಾಗೂ ಉಪನ್ಯಾಸಕರ ಹುದ್ದೆಯಲ್ಲಿ ಪರೀಕ್ಷಾರ್ಥ ಅವಧಿ ತೃಪ್ತಿಕರವಾಗಿ ಘೋಷಣೆ ಮಾಡಿರುವ ಆದೇಶದ ಪ್ರತಿಯನ್ನು ಒದಗಿಸಬೇಕು. ಆದೇಶದ ಪ್ರತಿ ಲಭ್ಯವಿಲ್ಲದಿದ್ದಲ್ಲಿ ಸೇವಾ ಪುಸ್ತಕದಲ್ಲಿ ನಮೂದಿಸಿರುವ ದಾಖಲೆ ಆಧಾರದ ಮೇಲೆ ಪ್ರಾಚಾರ್ಯರಿಂದ (ಉಪನ್ಯಾಸಕರ ಹುದ್ದೆಯಲ್ಲಿ ಘೋಷಿಸಿದ) ಪರೀಕ್ಷಾರ್ಥ ಅವಧಿ ಪೂರೈಸಿರುವ ಬಗ್ಗೆ ಮೂಲ ಪ್ರಮಾಣ ಪತ್ರ ಸಲ್ಲಿಸಬೇಕು. (ನಮೂನೆ-4)

12. ಕೌನ್ಸೆಲಿಂಗ್‌ಗೆ ಹಾಜರಾಗುವ ಉಪನ್ಯಾಸಕರು ಕಡ್ಡಾಯವಾಗಿ ಇಲಾಖೆಯು ನೀಡಿರುವ **ಭಾವಚಿತ್ರವುಳ್ಳ ಗುರುತಿನ ಪತ್ರ** ಅಥವಾ **ಪ್ರಾಚಾರ್ಯರಿಂದ ದೃಢೀಕರಿಸಿದ ಇತ್ತೀಚಿನ ಭಾವಚಿತ್ರವುಳ್ಳ ಗುರುತಿನ ಸೇವಾ ಪ್ರಮಾಣ ಪತ್ರವನ್ನು** ಕಡ್ಡಾಯವಾಗಿ ತರತಕ್ಕದ್ದು.

13. ಅನ್ವಯಿಸುವ ದಾಖಲೆಗಳನ್ನು ಹಾಜರುಪಡಿಸದೇ ಇಲ್ಲದಿದ್ದಲ್ಲಿ ಕೌನ್ಸೆಲಿಂಗ್‌ಗೆ ಅವಕಾಶ ನೀಡದೆ, ತಿರಸ್ಕರಿಸಲಾಗುವುದು.

*ವಿಶೇಷ ಸೂಚನೆ:- ವರ್ಗಾವಣೆಗೆ ಸಂಬಂಧಿಸಿದಂತೆ ಯಾವುದೇ ಸುಳ್ಳು / ತಪ್ಪು ಮಾಹಿತಿ ನೀಡಿದ್ದಲ್ಲಿ ಶಿಸ್ತುಕ್ರಮಕ್ಕೆ ಗುರಿಪಡಿಸಲಾಗುವುದು. ಒಮ್ಮೆ ನಮೂದಿಸಿದ ಕೆ ಜಿ ಐ ಡಿ ಸಂಖ್ಯೆಯನ್ನು ಮತ್ತೊಮ್ಮೆ ಪುನಾರವರ್ತನೆ ಮಾಡಿ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅರ್ಜಿ ಸಲ್ಲಿಸುವ ಸಮಯದಲ್ಲಿ ಪ್ರತಿಯೊಂದು ಅಂಶದ ಬಗ್ಗೆ ಮನವರಿಕೆ ಮಾಡಿಕೊಂಡು ನಮೂದು ಮಾಡಲು ಸೂಚಿಸಿದೆ.*

## ಎ, ಬಿ ಮತ್ತು ಸಿ ವಲಯಗಳ ವರ್ಗೀಕರಣದ ಮಾನದಂಡ

| ಕ್ಷೇತ್ರ | ಕಾಲೇಜಿನ ವರ್ಗ | ವರ್ಗೀಕರಣದ ಮಾನದಂಡ | ಪ್ರತಿ ವರ್ಷದ ಪೂರ್ಣ ಸೇವೆಗೆ ನಿಗಧಿಪಡಿಸಿದ ಕೃಪಾಂಕ |
|---|---|---|---|
| ನಗರ ಪ್ರದೇಶ | ಎ ವರ್ಗ (ಎ ವಲಯ) | ಎಲ್ಲಾ ಮಹಾನಗರಪಾಲಿಕೆ, ನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್, ಅಧಿಸೂಚಿತ ಪ್ರದೇಶ ಇತ್ಯಾದಿಗಳು ಪಟ್ಟಣ ಪ್ರದೇಶ ಹಾಗೂ ತಾಲ್ಲೂಕು ಕೇಂದ್ರಗಳ ವ್ಯಾಪ್ತಿ ಸರಹದ್ದಿನ ಒಳಗಿನ ಪ್ರದೇಶಗಳು | 1.00 |
| | ಬಿ ವರ್ಗ (ಬಿ ವಲಯ) | ಬೆಂಗಳೂರು ನಗರದ ಗಡಿಯಿಂದ 20 ಕಿ.ಮೀ. ಇತರೆ ಮಹಾನಗರ ಪಾಲಿಕೆಗಳ ಗಡಿಯಿಂದ 15 ಕಿ.ಮೀ. ಜಿಲ್ಲಾ ಕೇಂದ್ರ ಸ್ಥಾನಗಳು, ನಗರಪಾಲಿಕೆ ಗಡಿಯಿಂದ 10 ಕಿ.ಮೀ. ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್, ಅಧಿಸೂಚಿತ ಪ್ರದೇಶ ತಾಲ್ಲೂಕು ಕೇಂದ್ರ ಸ್ಥಾನಗಳ ಗಡಿಯಿಂದ 5 ಕಿ.ಮೀ ಒಳಗಿನ ಪ್ರದೇಶಗಳು | 1.50 |
| ಗ್ರಾಮಾಂತರ ಪ್ರದೇಶ | ಸಿ ವರ್ಗ (ಸಿ ವಲಯ) | ಎ ಮತ್ತು ಬಿ ವರ್ಗದ ಪ್ರದೇಶಗಳನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ಗ್ರಾಮಾಂತರ ಪ್ರದೇಶಗಳು | 2.00 |

*ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ:*

*'ಎ' ವಲಯದಲ್ಲಿ ನಿರಂತರವಾಗಿ ಹತ್ತು ವರ್ಷ ಹಾಗು ಹತ್ತು ವರ್ಷ ಮೇಲ್ಪಟ್ಟು ಸೇವೆ ಸಲ್ಲಿಸಿರುವ ಉಪನ್ಯಾಸಕರುಗಳ ವಿವರವಾದ ಮಾಹಿತಿಯನ್ನು ನಮೂನೆಯಲ್ಲಿ ದಿನಾಂಕ: 02/02/2018 ರೊಳಗಾಗಿ ತಪ್ಪದೇ ಸಲ್ಲಿಸಲು ಸೂಚಿಸಿದೆ.*

24/1.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಇವರಿಗೆ:–

1. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು – ಇವರ ಕಾರುಣ್ಯ ಅವಗಾಹನೆಗೆ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿ (ಪ್ರಾಥಮಿಕ ಮತ್ತು ಪ್ರೌಢ) ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು – ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

ಪ್ರತಿ:–

1. ಜಂಟಿ ನಿರ್ದೇಶಕರು (ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ – ಕೌನ್ಸೆಲಿಂಗ್ ಮೇಲುಸ್ತುವಾರಿಗಾಗಿ.
2. ಉಪ ನಿರ್ದೇಶಕರು (ಆಡಳಿತ) ಪದವಿ ಪೂರ್ವ ಶಿಕ್ಷಣ ಇಲಾಖೆ – ಕೌನ್ಸೆಲಿಂಗ್ ಮೇಲುಸ್ತುವಾರಿಗಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ – ***ಈ ಬಗ್ಗೆ ತಮ್ಮ ಜಿಲ್ಲೆಯಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಗಮನಕ್ಕೆ ತರಲು ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲು ಕೋರಿದೆ ಮತ್ತು ವರ್ಗಾವಣೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಉಪನ್ಯಾಸಕರುಗಳ ವರ್ಗಾವಣೆ ಅರ್ಜಿಗಳನ್ನು ಉಪನ್ಯಾಸಕರಿಂದ ಪಡೆದು ಒಂದೇ ತಂಡದಲ್ಲಿ ನಿಗಧಿತ ದಿನಾಂಕದೊಳಗೆ ಖುದ್ದಾಗಿ ಈ ಕಚೇರಿಗೆ ಸಲ್ಲಿಸುವುದು. ತಪ್ಪಿದಲ್ಲಿ ಮುಂದಿನ ಆಗುಹೋಗುಗಳಿಗೆ ನಿಮ್ಮನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು.***
4. ಸಹಾಯಕ ನಿರ್ದೇಶಕರು, ಇ–ಆಡಳಿತ ಶಾಖೆ, ಅಂತರ್‌ಜಾಲದಲ್ಲಿ ಮಾಹಿತಿಗಳನ್ನು ಅಳವಡಿಸುವ ಬಗ್ಗೆ ಮತ್ತು ಅಗತ್ಯ ಕ್ರಮಕ್ಕೆ.
5. ಸೀನಿಯರ್ ಪ್ರೋಗ್ರಾಮರ್, ಗಣಕಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು – ಕೌನ್ಸೆಲಿಂಗ್ ಸಿದ್ದತೆ ಮತ್ತು ಸಹಕಾರಕ್ಕಾಗಿ.
6. ಹೆಚ್ಚುವರಿ ಪ್ರತಿ / ಕಚೇರಿ ಪ್ರತಿ.

## 2017-18 ನೇ ಸಾಲಿಗೆ ಕೌನ್ಸೆಲಿಂಗ್ ಮೂಲಕ ನಡೆಯುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವರ್ಗಾವಣೆ ಪ್ರಕ್ರಿಯೆಯ ಕರಡು ತಾತ್ಕಾಲಿಕ ವೇಳಾಪಟ್ಟಿ:-

| ಕ್ರ ಸಂ | ವಿವರ | ನಿಗಧಿಪಡಿಸಿದ ದಿನಾಂಕ | ನಿರ್ವಹಣಾಧಿಕಾರಿ |
|---|---|---|---|
| 1 | ವರ್ಗಾವಣೆಗೆ ಅರ್ಜಿ ನಮೂನೆ (ON LINE) ಅಂತರ್ಜಾಲಕ್ಕೆ ಅರ್ಜಿ ನಮೂನೆ ಅಳವಡಿಸುವುದು | 24/01/2018 | ಆಡಳಿತ ಮತ್ತು ಇ-ಆಡಳಿತ ಶಾಖೆಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು (ಸೀನಿಯರ್ ಪ್ರೋಗ್ರಾಮರ್ ಇವರ ಸಹಕಾರದೊಂದಿಗೆ) |
| 2 | ಪ್ರಾಚಾರ್ಯರು ಅಂತರ್ಜಾಲದ (ON LINE) ಮೂಲಕ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ | 02/02/2018 | ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರು |
| 3 | ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಗಳ ದಾಖಲಾತಿಗಳನ್ನು ಉಪನಿರ್ದೇಶಕರಿಗೆ ಸಲ್ಲಿಸಲು ಕೊನೆಯ ದಿನಾಂಕ | 06/02/2018 | ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿ ಮುದ್ರಿತ ಪ್ರತಿ ಮತ್ತು ಅದಕ್ಕೆ ಸಂಬಂಧಿಸಿದಂತೆ ಅನ್ವಯಿಸುವ ಎಲ್ಲಾ ಪೂರಕ ದಾಖಲೆಗಳನ್ನು ಪ್ರಾಚಾರ್ಯರು ಜಿಲ್ಲಾ ಉಪ ನಿರ್ದೇಶಕರಿಗೆ ಕಡ್ಡಾಯವಾಗಿ ಸಲ್ಲಿಸುವುದು. ಜಿಲ್ಲಾ ಉಪ ನಿರ್ದೇಶಕರು ಪ್ರಾಚಾರ್ಯರಿಂದ ಪಡೆದು ನಿರ್ದೇಶನಾಲಯಕ್ಕೆ ಖುದ್ದಾಗಿ ನಿಗಧಿತ ದಿನಾಂಕದೊಳಗೆ ತಲುಪಿಸುವುದು. |
| 4 | ಪ್ರಾಚಾರ್ಯರು ಸಲ್ಲಿಸಿರುವ ವರ್ಗಾವಣೆ ಅರ್ಜಿಗಳನ್ನು ಕೇಂದ್ರ ಕಚೇರಿಗೆ ಕಳುಹಿಸುವುದು | 10/02/2018 | ಜಿಲ್ಲಾ ಉಪ ನಿರ್ದೇಶಕರು ಪ್ರಾಚಾರ್ಯರ ವರ್ಗಾವಣೆ ಅರ್ಜಿಗಳನ್ನು ಕ್ರಮ ಸಂಖ್ಯಾವಾರು **ಜೋಡಿಸಿ** ಒಂದೇ ತಂಡದಲ್ಲಿ ಕೇಂದ್ರ ಕಚೇರಿಗೆ ಕಳುಹಿಸುವುದು (ಅದ್ಯತೆಯಡಿಲ್ಲಿ ಕೋರಿರುವ ಪ್ರಕರಣಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸಿರುವುದನ್ನು ದೃಢಪಡಿಸಿಕೊಳ್ಳುವುದು). |
| 5 | ಪ್ರಾಚಾರ್ಯರು ಅಂತರ್ಜಾಲದ (ON LINE) ಮೂಲಕ ಸಲ್ಲಿಸಿರುವ ವರ್ಗಾವಣೆ ಅರ್ಜಿಗಳನ್ನು ಆಗ್ಗಿಂದಾಗ್ಗೆ ಡೌನ್‌ಲೋಡ್ ಮಾಡಿ ಪರಿಶೀಲನೆ ನಡೆಸುವುದು ಹಾಗೂ ಈ ಕಾರ್ಯಕ್ಕೆ ಕೊನೆಯ ದಿನಾಂಕ | 16/02/2018 | ಆಡಳಿತ ಮತ್ತು ಇ-ಆಡಳಿತ ಶಾಖೆಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು (ಸೀನಿಯರ್ ಪ್ರೋಗ್ರಾಮರ್ ಇವರ ಸಹಕಾರದೊಂದಿಗೆ) |
| 6 | ಇಲಾಖೆಯ ಅಂತರ್ಜಾಲದಲ್ಲಿ ತಾತ್ಕಾಲಿಕ ಅಧ್ಯತಾ ಪಟ್ಟಿ ಪ್ರಕಟಣೆ (ನಿಯಮ 14 ಮತ್ತು 16 ರಲ್ಲಿ ನಿಗದಿಪಡಿಸಿರುವಂತೆ ಪ್ರಕಟಿಸಲಾಗುವುದು) | 22/02/2018 | ಆಡಳಿತ ಮತ್ತು ಇ-ಆಡಳಿತ ಶಾಖೆಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು (ಸೀನಿಯರ್ ಪ್ರೋಗ್ರಾಮರ್ ಇವರ ಸಹಕಾರದೊಂದಿಗೆ) |
| 7 | ತಾತ್ಕಾಲಿಕ ಆಧ್ಯತಾ ಪಟ್ಟಿಗೆ ಅಕ್ಷೇಪಣೆ ಸಲ್ಲಿಸಲು ಅಂತಿಮ ದಿನಾಂಕ | 28/02/2018 | **ಆಕ್ಷೇಪಣೆಗಳನ್ನು ಸಲ್ಲಿಸಬೇಕಾದ ವಿಳಾಸ:-**<br>ಉಪ ನಿರ್ದೇಶಕರು (ಆಡಳಿತ), ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರ, 18 ನೇ ಅಡ್ಡ ರಸ್ತೆ, ಬೆಂಗಳೂರು – 560 012 |
| 8 | ಸ್ವೀಕರಿಸಲಾದ ಆಕ್ಷೇಪಣೆಗಳ ಪರಿಶೀಲನೆ ಹಾಗೂ ಅಂತಿಮ ಆಧ್ಯತಾ ಪಟ್ಟಿ ಪ್ರಕಟಣೆ | 08/03/2018 | ಆಡಳಿತ ಮತ್ತು ಇ-ಆಡಳಿತ ಶಾಖೆಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು (ಸೀನಿಯರ್ ಪ್ರೋಗ್ರಾಮರ್ ಇವರ ಸಹಕಾರದೊಂದಿಗೆ) |
| 9 | ಅಂತಿಮ ಆಧ್ಯತಾ ಪಟ್ಟಿಯಂತೆ ಗಣಕೀಕೃತ ಕೌನ್ಸೆಲಿಂಗ್ ವರ್ಗಾವಣೆ ನಡೆಸುವುದು | 19/03/2018 ರಿಂದ 23/03/2018 | **ಸ್ಥಳ:** **ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು**<br>**ಸಮಯ:** ಬೆಳಗ್ಗೆ 9:00 ರಿಂದ |

22/1/18

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

# ನಮೂನೆ – 1

## ವೈದ್ಯಕೀಯ ಪ್ರಕರಣದಡಿಯಲ್ಲಿ ಆದ್ಯತೆ ಬಯಸುವ ಉಪನ್ಯಾಸಕರು ಸಲ್ಲಿಸಬೇಕಾದ ವೈದ್ಯಕೀಯ ಪ್ರಮಾಣ ಪತ್ರದ ನಮೂನೆ

**ಕರ್ನಾಟಕ ಸರ್ಕಾರ**

ಸಂಖ್ಯೆ: /2017-18

ಅಧೀಕ್ಷಕರು
ಜಿಲ್ಲಾ ಆಸ್ಪತ್ರೆ
-----------------
ದಿನಾಂಕ:

**ವೈದ್ಯಕೀಯ ಪ್ರಮಾಣ ಪತ್ರ**

ವೈದ್ಯಕೀಯ ಮಂಡಳಿ

1. ಡಾ: (ಹೆಸರು) – ಚೇರ್ಮನ್
   ಅಧೀಕ್ಷಕರು
2. ಡಾ: (ಹೆಸರು) – ಸದಸ್ಯರು
   (ಹಿರಿಯ ತಜ್ಞರು)
3. ಡಾ: (ಹೆಸರು) – ಸದಸ್ಯರು
   (ಹಿರಿಯ ತಜ್ಞರು)
4. ಡಾ: (ಹೆಸರು) – ಸದಸ್ಯರು
   (ತಜ್ಞರು)

ಶ್ರೀಮತಿ/ಶ್ರೀ (ಹೆಸರು) ಉಪನ್ಯಾಸಕರು. ಸರ್ಕಾರಿ ಪದವಿ ಪೂರ್ವ ಕಾಲೇಜು. (ಸ್ಥಳ) ಇವರನ್ನು / ಇವರ ಪತಿ / ಪತ್ನಿ / ಮಗಳು / ಮಗ (ಹೆಸರು) ಖಾಯಿಲೆಯಿಂದ ಬಳಲುತ್ತಿದ್ದು. ಇವರಿಗೆ ನೀಡಲಾಗುತ್ತಿರುವ ಚಿಕಿತ್ಸೆ (ಸ್ಥಳ) ದಲ್ಲಿ ದೊರೆಯುತ್ತಿಲ್ಲವಾದ್ದರಿಂದ. ಈ ಚಿಕಿತ್ಸೆ ದೊರೆಯುವ ಸ್ಥಳ ಇಲ್ಲಿಗೆ ಇವರನ್ನು ವರ್ಗಾವಣೆ ಮಾಡುವುದು ಸೂಕ್ತವೆಂದು ಅಭಿಪ್ರಾಯಪಟ್ಟಿದೆ.

ಹಿರಿಯ ತಜ್ಞರು     ಹಿರಿಯ ತಜ್ಞರು     ಅಧೀಕ್ಷಕರು / ಚೇರ್ಮನ್

## ನಮೂನೆ – 2

2017-18ನೇ ಸಾಲಿನಲ್ಲಿ ಕೌನ್ಸಲಿಂಗ್ ಮೂಲಕ ನಡೆಯುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವರ್ಗಾವಣೆಗೆ ಪತಿ – ಪತ್ನಿ ಪ್ರಕರಣದಲ್ಲಿ ಅರ್ಜಿ ಸಲ್ಲಿಸಿದಲ್ಲಿ ಪತಿ ಅಥವಾ ಪತ್ನಿ ಉದ್ಯೋಗದಲ್ಲಿರುವ ಬಗ್ಗೆ ದೃಢೀಕರಣವು ಈ ಕೆಳಕಂಡ ನಮೂನೆಯಲ್ಲಿರಬೇಕು.

**(ನಮೂನೆ – 1 ರ ಜೊತೆಗೆ).**

ಸಂಖ್ಯೆ: /2017-18. ಕಚೇರಿ ವಿಳಾಸ

ದಿನಾಂಕ:

**ದೃಢೀಕರಣ ಪತ್ರ**

ಶ್ರೀಮತಿ / ಶ್ರೀ ಇವರ ಪತಿ/ಪತ್ನಿ ಶ್ರೀ / ಶ್ರೀಮತಿ ಈ ಕಚೇರಿಯಲ್ಲಿ ದಿನಾಂಕದಿಂದ (ಹುದ್ದೆಯ ಹೆಸರು) ಹುದ್ದೆಯಲ್ಲಿ ತಾತ್ಕಾಲಿಕ / ಖಾಯಂ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಸ್ಥೆಯು ರಾಜ್ಯ ಸರ್ಕಾರದ* / ಕೇಂದ್ರ ಸರ್ಕಾರದ* / ಖಾಸಗಿ ಅನುದಾನಿತ* / ಅರೆ ಸರ್ಕಾರಿ* ಸಂಸ್ಥೆಯಾಗಿರುತ್ತದೆ.

ಅಧಿಕಾರಯುಕ್ತ ಅಧಿಕಾರಿಯ ಸಹಿ ದಿನಾಂಕದೊಂದಿಗೆ
ಸಂಸ್ಥೆಯ/ಕಚೇರಿಯ ಮೊಹರು

* ಅನ್ವಯಿಸದೇ ಇರುವುದಕ್ಕೆ ಅಡ್ಡ ಗೆರೆಹಾಕುವುದು.

## ನಮೂನೆ – 3

2017-18 ನೇ ಸಾಲಿಗೆ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಬಯಸಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಉಪನ್ಯಾಸಕರು ಸಲ್ಲಿಸಿರುವ ವಲಯವಾರು / ಕಾಲೇಜುವಾರು ಸಲ್ಲಿಸಿರುವ ಸೇವಾ ವಿವರ:

| ಉಪನ್ಯಾಸಕರಾಗಿ ಸೇವೆಗೆ ಕೌನ್ಸೆಲಿಂಗ್ ಸಲ್ಲಿಸಿರುವ ವಲಯವಾರು / ಕಾಲೇಜುವಾರು ಸಲ್ಲಿಸಿರುವ ಸೇವಾ ವಿವರ | | | | | | | | |
|---|---|---|---|---|---|---|---|---|
| Sl No | Name of the Institution (College) | Zone A, B, C | College Code | College Code | Duration | | Total Service in Completed Years Only | Total Weightage/ Marks (For Completed Years Only) |
| | | | | | From Date | To Date | | |
| 1. | | | | | | | | |
| 2. | | | | | | | | |
| 3. | | | | | | | | |
| 4. | | | | | | | | |
| 5. | | | | | | | | |
| 6. | | | | | | | | |
| 7. | | | | | | | | |
| 8. | | | | | | | | |

ಶ್ರೀಮತಿ / ಶ್ರೀ (ಹೆಸರು)

(ಬೋಧನಾ ವಿಷಯ) ಇವರು 2013 ರಿಂದ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಪಡೆದಿರುವುದಿಲ್ಲವೆಂದು ಸೇವಾ ಪುಸ್ತಕ ಪರಿಶೀಲಿಸಿ ದೃಢೀಕರಿಸಿದೆ.

ಉಪನ್ಯಾಸಕರ ಸಹಿ

ಪ್ರಾಚಾರ್ಯರ ಸಹಿ ದಿನಾಂಕದೊಂದಿಗೆ

ಮೊಹರು

# ನಮೂನೆ – 4

(ಪರೀಕ್ಷಾರ್ಥ ಅವಧಿ ತೃಪ್ತಿಕರವಾಗಿ ಘೋಷಿಸಿದ ಆದೇಶದ ಪ್ರತಿ ಲಭ್ಯವಿಲ್ಲದಿದ್ದಲ್ಲಿ ಮಾತ್ರ ಈ ಪ್ರಮಾಣ ಪತ್ರ ಉಪಯೋಗಿಸತಕ್ಕದ್ದು)

ಪ್ರಾಚಾರ್ಯರ ಕಾರ್ಯಾಲಯ, ಸರ್ಕಾರಿ ಪದವಿ ಪೂರ್ವ ಕಾಲೇಜು, ಜಿಲ್ಲೆ.

ಸಂಖ್ಯೆ: ದಿನಾಂಕ:

## ಪ್ರಮಾಣ ಪತ್ರ

ಶ್ರೀಮತಿ / ಶ್ರೀ (ಉಪನ್ಯಾಸಕರ ಹೆಸರು) (ಬೋಧನಾ ವಿಷಯ) ಇವರು ದಿನಾಂಕ: ರಂದು ಉಪನ್ಯಾಸಕರಾಗಿ ಸೇವೆಗೆ ಸೇರಿದ್ದು, ಸೇವಾ ಪುಸ್ತಕ ಪುಟ ಸಂಖ್ಯೆ: ರಲ್ಲಿ ನಮೂದಿಸಿರುವ ದಾಖಲೆ ಪ್ರಕಾರ ಸದರಿಯವರು ಉಪನ್ಯಾಸಕರ ಹುದ್ದೆಯಲ್ಲಿ ದಿನಾಂಕ: ರಿಂದ ಅನ್ವಯಿಸುವಂತೆ ಪರೀಕ್ಷಾರ್ಥ ಅವಧಿಯನ್ನು ಸಂಖ್ಯೆ: ದಿನಾಂಕ: ರ ಪ್ರಕಾರ ತೃಪ್ತಿಕರವಾಗಿ ಪೂರೈಸಿರುತ್ತಾರೆ ಹಾಗೂ 2013 ರಿಂದ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಪಡೆದಿರುವುದಿಲ್ಲವೆಂದು ಪ್ರಮಾಣೀಕರಿಸಿದೆ.

ಪ್ರಾಚಾರ್ಯರು
ಸರ್ಕಾರಿ ಪದವಿ ಪೂರ್ವ ಕಾಲೇಜು,